ಗ್ರಾಮಾಂತರ ಉದ್ಯಮಗಳು

155 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣ ಪ್ರದೇಶದಲ್ಲಿ ಕುಂಬಾರಿಕೆ, ಗಾಣಿಗಾರಿಕೆ, ಸುಣ್ಣಗಾರಿಕೆ, ಮೇದಾರಿಕೆ ಕೈಮಗ್ಗ, ಬಡಿಗತನ, ಕಮ್ಮಾರಿಕೆ ಚರ್ಮಗಾರಿಕೆ, ನೇಕಾರಿಗೆ ಮೊದಲಾದ ಉದ್ಯಮಗಳು ನಾಶವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಉದ್ಯಮಗಳನ್ನು ಉಳಿಸಲು ಹಾಗೂ ಪ್ರೋತ್ಸಾಹಿಸಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ?

ಶ್ರೀ ಎನ್.ಎಂ. ನಬೀ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ವಿಶೇಷ ಘಟಕ ಯೋಜನೆ

150 - ಶ್ರೀ ಯು.ಬಿ. ಬಣಕಾರ್ (ಹಿರೇಕೇರೂರು) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶೇಷ ಘಟಕ ಯೋಜನೆಯಲ್ಲಿ 91-92,92-93,93-94ರಲ್ಲಿ ಸರಕಾರ ನಿಗದಿಪಡಿಸಿದ, ಬಿಡುಗಡೆ ಮಾಡಿದ ಖರ್ಚು ಮಾಡಿದ ಖರ್ಚು ಮಾಡದೆ ಉಳಿಸಿದ ಹಣವೆಷ್ಟು

ಆ) ವಿಶೇಷ ಘಟಕ ಯೋಜನೆಯಲ್ಲಿ ಕೇಂದ್ರ ಸರ್ಕಾರ ಕೊಟ್ಟಿರುವ ಹಣ, ರಾಜ್ಯ ಸರ್ಕಾರವು ಕೊಡಬೇಕಾದ ಹಣ ಹಾಗೂ ರಾಜ್ಯ ಸರ್ಕಾರವು ಕೊಟ್ಟ ಹಣ 91-92,92-93 ಮತ್ತು 93-94ರಲ್ಲಿ ಎಷ್ಟು

ಇ) 1994-95 ರಲ್ಲಿ ಈ ಯೋಜನೆಯಲ್ಲಿ ಬಿಡುಗಡೆ ಮಾಡಿದ ಹಾಗೂ ಖರ್ಚು ಮಾಡಿದ ಹಣ 30-11-94ಕ್ಕೆ ಎಷ್ಟು?

ಶ್ರೀ ರಮೇಶ್ ಸಿ.ಜಿ ಗಜಿಣಗಿ (ಸಮಾಜಕಲ್ಯಾಣ ಸಚಿವರು) :

ಅ) 1991-92,1992-93, ಮತ್ತು 1993-94ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯ ರಾಜ್ಯ ಯೋಜನೆಯಡಿ ರಾಜ್ಯದ ಯೋಜನಾ ಇಲಾಖೆಯು ನಿಗದಿಗೊಳಿಸಿದ ಹಾಗೂ ವಿವಿಧ ಅಭಿವೃದ್ಧಿ ಇಲಾಖೆಗಳಿಂದ ಬಂದ ವರದಿಯ ಪ್ರಕಾರ ಬಿಡುಗಡೆ ಮಾಡಿದ ಮತ್ತು ಖರ್ಚು ಮಾಡಿದ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಕ್ರ ಸಂ	ವರ್ಷ	ನಿಗದಿಪಡಿಸಿ ಹಣ	ಬಿಡುಗಡೆ ಮಾಡಿದ ಹಣ	ಖರ್ಚುಮಾಡಿದ ಹಣ	ಖರ್ಚು ಮಾಡದೇ ಬಾಕಿ ಉಳಿದ ಹಣ
					ರೂ.ಲಕ್ಷಗಳಲ್ಲಿ
1.	1991-92	13851.14	13851.14	11013.60	2947.94
2.	1992-93	17602.07	17602.07	16049.17	3315.44
3.	1993-94	28069.49	28069.49	25893.95	4751.40

ಆ) 1991-92,1992-93 ಮತ್ತು 1993-94ರಲ್ಲಿ ಕೇಂದ್ರ ಸರ್ಕಾರದಿಂದ ಮಂಜೂರಾದ ವಿಶೇಷ ಕೇಂದ್ರೀಯ ನೆರವಿನಿಂದ ವಿವರಗಳು

ರೂ. ಲಕ್ಷಗಳಲ್ಲಿ

ಕ್ರ ಸಂ	ವರ್ಷ	ಕೇಂದ್ರ ಸರ್ಕಾರದಿಂದ ಮಂಜೂರಾದ ವಿಶೇಷ ಕೇಂದ್ರೀಯ ನೆರವು	ವಿವಿಧ ಅಭಿವೃದ್ಧಿ ಇಲಾಖೆಗಳಿಗೆ ಬಿಡುಗಡೆ ಮಾಡಿದ ಮೊತ್ತ
1.	1991-92	1485.71	1485.71
2.	1992-93	1310.00	1310.00
3.	1993-94	1282.71	1282.71

ಇದು ಕೇಂದ್ರ ಸರ್ಕಾರದ ಸಹಾಯಧನವಾಗಿರುವುದರಿಂದ ರಾಜ್ಯ ಸರ್ಕಾರದ ಪಾಲಿನ ಪ್ರಶ್ನೆಯು ಉದ್ಭವಿಸುವುದಿಲ್ಲ.

ಇ) 1994-95ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯ ಅನುಷ್ಠಾನಕ್ಕಾಗಿ ನಿಗದಿಗೊಳಿಸಿದ ಹಣ ಹಾಗೂ 30-11-94ಕ್ಕೆ ಖರ್ಚಾದ ಹಣದ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ರೂ. ಲಕ್ಷಗಳಲ್ಲಿ)

ಕ್ರ ಸಂ	ರಾಜ್ಯ ಯೋಜನೆಯಡಿ ನಿಗದಿ ಗೊಳಿಸಿದ ಮೊತ್ತ		30-11-94ಕ್ಕೆ ಖರ್ಚಾದ ಹಣ
1.	ರಾಜ್ಯ ವಲಯ	21011.55	8541.13
2.	ಜಿಲ್ಲಾ ವಲಯ	9341.48	2082.25
	ಒಟ್ಟು	30353.03	10623.55

ಸಹಕಾರಿ ಸಕ್ಕರೆ ಕಾರ್ಖಾನೆ

153 - ಶ್ರೀ ಯು.ಬಿ. ಬಣಕರ್ (ಹಿರೇಕೇರೂರು) : ಮಾನ್ಯ ಸಕ್ಕರೆ, ಜವಳಿ, ಪರಿಸರ ಮಾನ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳಾವುವು

ಆ) ಈ ಕಾರ್ಖಾನೆಗಳ ಉತ್ಪಾದನಾ ಸಾಮರ್ಥ್ಯ ಹಾಗೂ 91-92,93-94 ರಲ್ಲಿ ಅನುರಿಸಿದ ಕಬ್ಬು ಉತ್ಪಾದಿಸುವ ಸಕ್ಕರೆ, ಹಾಗೂ ಉತ್ಪಾದಿಸಿದ ಸಕ್ಕರೆಯ ಪ್ರಮಾಣ ಶೇಕಡಾ ಎಷ್ಟು

ಇ) ಈ ಸಕ್ಕರೆ ಕಾರ್ಖಾನೆಗಳು ಸಹಕಾರಿ ಆದೇಶದ ಅನ್ವಯ ಕಬ್ಬು ಬೆಳೆಗಾರರಿಗೆ ನೀಡಬೇಕಾಗಿದ್ದ ಟನ್‌ವಾರು ಬೆಲೆಯಷ್ಟು ಹಾಗೂ ವಾಸ್ತವಿಕವಾಗಿ ಈ ಕಾರ್ಖಾನೆಗಳು ರೈತರಿಗೆ ಕೊಟ್ಟ ಕಬ್ಬಿನ ಬೆಲೆಯಷ್ಟು ?

ಈ) ಈ ಕಾರ್ಖಾನೆಗಳ ಸಂಪೂರ್ಣ ಸಾಮರ್ಥ್ಯದ ಕಬ್ಬನ್ನನು ಅರೆಯದೆ ಇರುವುದು ಎಷ್ಟು ?

ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ಪರಿಸರ ಮಾಲಿನ್ಯ ಸಚಿವರು):

ಅ) ವಿವರವನ್ನು ಅನುಬಂಧ-ಅ ನಲ್ಲಿ ನೀಡಲಾಗಿದೆ.

ವಿವರವನ್ನು ಅನುಬಂಧ-ಅ ನಲ್ಲಿ ನೀಡಲಾಗಿದೆ.

ಸಂಪೂರ್ಣ ಸಾಮರ್ಥ್ಯದ ಕಬ್ಬು ಅರೆಯದ ಕಾರ್ಖಾನೆಗಳ ಸಂಖ್ಯೆ

1. 1991-92 - 2
2. 1992-93 - 5
3. 1993-94 - 7